http : //www.sjmcascchitradurga.edu.in ಎಸ್.ಜೆ.ಎಂ.ವಿದ್ಯಾಪೀಠ (ರಿ.), ಚಿತ್ರದುರ್ಗ
email : sjmascta@rediffmail.com

☎ ಕಛೇರಿ : 08194-222506
ಫ್ಯಾಕ್ಸ್ : 222444

**ಶ್ರೀ ಜಗದ್ಗುರು ಮುರುಘರಾಜೇಂದ್ರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ**

ಚಂದ್ರವಳ್ಳಿ, ಚಿತ್ರದುರ್ಗ - 577 501. ಪೋಸ್ಟ್ ಬಾಕ್ಸ್ ನಂ. 88, ಕರ್ನಾಟಕ

ನ್ಯಾಕ್ ಪುನರ್ಮಾನ್ಯತೆ : 'ಎ' ಗ್ರೇಡ್ ಸಿ.ಜಿ.ಪಿ.ಎ. 3.05

**SRI JAGADGURU MURUGHARAJENDRA COLLEGE OF ARTS, SCIENCE & COMMERCE**

Chandravalli, CHITRADURGA - 577 501. Post Box No. 88, Karnataka

NAAC Reaccredited with 'A' Grade CGPA 3.05

ಕ್ರಮಾಂಕ : ಎಸ್.ಜೆ.ಎಂ.ಪಿ. /44/2021 /2020-2021 ದಿನಾಂಕ : 02.07.2021

ಗೆ,

ಪ್ರಾದೇಶಿಕ ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ
ಶಿವಮೊಗ್ಗ

ಮಾನ್ಯರೇ,

ವಿಷಯ: 'ಪದವಿ ವಿದ್ಯಾರ್ಥಿಗಳಿಗೆ ಉಚಿತ ಕೋವಿಡ್ ಲಸಿಕಾ ಅಭಿಯಾನ' ಕಾರ್ಯಕ್ರಮದ ವರದಿ ಕಳುಹಿಸಿಕೊಡುವ ಬಗ್ಗೆ.

****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಮಹಾವಿದ್ಯಾಲಯದಲ್ಲಿ ದಿ:30–06–2021 ರಂದು ತಮ್ಮ ಮಾರ್ಗಸೂಚಿಯಂತೆ ನಮ್ಮ ಕಾಲೇಜಿನ ಆವರಣದಲ್ಲಿ 'ಪದವಿ ವಿದ್ಯಾರ್ಥಿಗಳಿಗೆ ಉಚಿತ ಕೋವಿಡ್ ಲಸಿಕಾ ಅಭಿಯಾನ' ಕಾರ್ಯಕ್ರಮವನ್ನು ಆಯೋಜಿಸಿ, ಕಾರ್ಯಕ್ರಮದ ವರದಿಯನ್ನು ಕಳುಹಿಸಿಕೊಡುತ್ತಿದ್ದೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ.ಕೆ.ಸಿ.ರಮೇಶ್)
PRINCIPAL
Sri Jagadguru Murugharajendra College
of Arts, Science & Commerce,
CHITRADURGA

Scanned with CamScanner

ಎಸ್.ಜೆ.ಎಂ. ವಿದ್ಯಾಪೀಠ (ರಿ.), ಚಿತ್ರದುರ್ಗ

**ಎಸ್.ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ**

**ಚಂದ್ರವಳ್ಳಿ, ಚಿತ್ರದುರ್ಗ–577501**

**ಹಾಗೂ**

**ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ.**

**ಇವುಗಳ ಸಹಯೋಗದಲ್ಲಿ**

# "ಪದವಿ ವಿದ್ಯಾರ್ಥಿಗಳಿಗೆ ಉಚಿತ ಕೋವಿಡ್ ಲಸಿಕೆ ಅಭಿಯಾನ"

ದಿನಾಂಕ: 30–06–2021 ಸಮಯ: ಬೆಳಗ್ಗೆ: 10.00 ಗಂಟೆಗೆ ಸ್ಥಳ: ಶ್ರೀ ಜಯದೇವ ಸಭಾಭವನ

## "ಕಾರ್ಯಕ್ರಮ ಪಟ್ಟಿ"

| | | |
|---|---|---|
| ಪ್ರಾರ್ಥನೆ | : | ವರಲಕ್ಷ್ಮಿ (ದ್ವಿತೀಯ ಬಿ.ಕಾಂ) |
| ಸ್ವಾಗತ | : | ಡಾ.ಕೆ.ಸಿ.ರಮೇಶ್<br>ಪ್ರಾಚಾರ್ಯರು |
| ಉದ್ಘಾಟನೆ | : | ಡಾ.ರಂಗನಾಥ್<br>ಜಿಲ್ಲಾ ಆರೋಗ್ಯಾಧಿಕಾರಿಗಳು<br>ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ,<br>ಚಿತ್ರದುರ್ಗ. |
| ಉಪಸ್ಥಿತಿ | : | ಡಾ.ಪಿ.ಸಿ.ಕುಮಾರಸ್ವಾಮಿ<br>ಜಿಲ್ಲಾ ಆರ್.ಸಿ.ಹೆಚ್.ಅಧಿಕಾರಿಗಳು<br>ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ,<br>ಚಿತ್ರದುರ್ಗ.<br><br>ಡಾ.ಗಿರೀಶ್<br>ವೈದ್ಯಾಧಿಕಾರಿಗಳು<br>ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.<br><br>ಡಾ.ಆರ್.ವಿ.ಹೆಗಡಾಳ್<br>ಐ.ಕ್ಯೂ.ಎ.ಸಿ. ಸಂಯೋಜಕರು |
| ವಂದನಾರ್ಪಣೆ | : | ಪ್ರೊ. ಹೆಚ್.ಕೆ.ಶಿವಪ್ಪ<br>ಉಪ ಪ್ರಾಚಾರ್ಯರು |
| ಕಾರ್ಯಕ್ರಮ ನಿರೂಪಣೆ | : | ಡಾ.ಬಿ.ರೇವಣ್ಣ<br>ಸಹಾಯಕ ಪ್ರಾಧ್ಯಾಪಕರು |

ಸೂಚನೆ: ಸ್ಯಾನಿಟೈಸರ್ ಬಳಸುತ್ತಾ, ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಳ್ಳಿ.

## :: ಸರ್ವರಿಗೂ ಸುಸ್ವಾಗತ :

Scanned with CamScanner

**ಎಸ್.ಜೆ.ಎಂ. ಕಲಾ,ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಂದ್ರವಳ್ಳಿ, ಚಿತ್ರದುರ್ಗ.**
**ಐ.ಕ್ಯೂ.ಎ.ಸಿ. ಎನ್.ಸಿ.ಸಿ. ಮತ್ತು ರಾ.ಸೇ.ಯೋ ಘಟಕ–1 & 2 ಹಾಗೂ**
**ಜಿಲ್ಲಾಡಳಿತ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ. ಇವುಗಳ ಸಹಯೋಗದಲ್ಲಿ**

ಕಾಲೇಜು ಶಿಕ್ಷಣ ಇಲಾಖೆ ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರ ಮಾರ್ಗಸೂಚಿಯಂತೆ ದಿನಾಂಕ 30-6-2021ರಂದು ನಮ್ಮ ಮಹಾವಿದ್ಯಾಲಯದಲ್ಲಿ 'ಪದವಿ ವಿದ್ಯಾರ್ಥಿಗಳಿಗೆ **ಉಚಿತ ಕೋವಿಡ್ ಲಸಿಕಾ ಅಭಿಯಾನ**' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಲಸಿಕೆ ನೀಡುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಡಾ|| ಆರ್. ರಂಗನಾಥ್ ಜಿಲ್ಲಾ ಆರೋಗ್ಯ ಅಧಿಕಾರಿಗಳು, ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ. ಇವರು ಕರೋನಾ ಸೋಂಕಿನ ನಿರ್ಲಕ್ಷದಿಂದಾಗಿಯೇ ಇತ್ತೀಚೆಗೆ ಯುವಜನರು ಅಧಿಕ ಸಂಖ್ಯೆಯಲ್ಲಿ ಸಾವಿಗೀಡಾಗುವಂತಾಗಿದೆ ಸೋಂಕಿನ ಬಗ್ಗೆ ವಿನಾಕಾರಣ ಭಯಬೇಡ ಆದರೆ ಎಲ್ಲರೂ ಲಸಿಕೆ ಹಾಕಿಸಿಕೊಳ್ಳುವ ಜೊತೆಗೆ ಮುನ್ನೆಚ್ಚರಿಕೆ ಕ್ರಮಗಳಾದ ಸ್ಯಾನಿಟೈಸರ್ ಬಳಸುತ್ತಾ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಪಾಡಿಕೊಂಡು ಎಚ್ಚರದಿಂದ ಇರಬೇಕು. ಕೋವಿಡ್ 19 ಕಡಿಮೆಯಾಗಿದೆ ಎಂಬ ಧೋರಣೆ ಬೇಡ. ಮೂರನೇ ಅಲೆ ಬರುತ್ತದೆ ಎಂದು ಆರೋಗ್ಯ ಸಲಹಾ ಸಮಿತಿ ಶಿಫಾರಸು ನೀಡಿದೆ ಹಾಗಾಗಿ ಎಲ್ಲಾ ವಿದ್ಯಾರ್ಥಿಗಳು ಮುನ್ನೆಚ್ಚರಿಕೆ ವಹಿಸುತ್ತಾ ಮುಂದಿನ ಎರಡು ವರ್ಷಗಳ ಕಾಲ ನಾವು ಅದರ ಜೊತೆಯಲ್ಲಿ ಜೀವಿಸ ಬೇಕಾಗಿದೆ. ಕೋವ್ಯಾಕ್ಸಿನ್ ಮತ್ತು ಕೋವಿಡ್ ಶೀಲ್ಡ್ ಎರಡು ಲಸಿಕೆಗಳು ಒಂದೇ ಯಾಗಿವೆ ಯಾರು ಭಯ ಆತಂಕ ಪಡುವ ಅಗತ್ಯವಿಲ್ಲ. ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನಮ್ಮ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಕೆ.ಸಿ.ರಮೇಶ್ ರವರು ಕರೋನಾ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಆನ್ಲೈನ್ ತರಗತಿಗಳು ನಡೆಯುತ್ತಿವೆ ಎಲ್ಲಾ ವಿದ್ಯಾರ್ಥಿಗಳು ತಪ್ಪದೇ ಕಡ್ಡಾಯವಾಗಿ ತರಗತಿಗಳಿಗೆ ಹಾಜರಾಗಿ ನಿಮ್ಮ ಸಮಸ್ಯೆಗಳು ಏನೇ ಇದ್ದರೂ ಮುಕ್ತವಾಗಿ ಫೋನ್ ಮಾಡಿ ತಮ್ಮ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಿ. ಕರೋನ ಪ್ರಪಂಚವನ್ನು ವ್ಯಾಪಿಸಿಕೊಂಡಿರುವ ಈ ವಿಷಮ ಸಂದರ್ಭದಲ್ಲಿ ನಾವು ಎಚ್ಚರಿಕೆಯಿಂದ ಇದ್ದು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುತ್ತ ಕೊರೋನಾ ಜೊತೆಯಲ್ಲಿಯೇ ನಮ್ಮ ಬದುಕು ಸಾಗಬೇಕಾಗಿದೆ. ಯಾರು ಭಯ ಆತಂಕ ಪಡುವುದು ಬೇಡ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಇದರ ಜೊತೆಗೆ ಭಾರತ ಸರ್ಕಾರದ ಕೋವಿಡ್ 19 ಲಸಿಕಾಕರಣ ಮಾರ್ಗ ಸೂಚನೆಗಳನ್ನು ಚಾಚೂತಪ್ಪದೆ ಅನುಸರಿಸಬೇಕು ಎಂದು ನಿರ್ದೇಶನ ನೀಡಿದರು.

ನಮ್ಮ ಕಾಲೇಜಿನ ಆವರಣದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ, ಬೋಧಕ ಮತ್ತು ಬೋಧಕೇತರ ವರ್ಗದವರಿಗೆ ಲಸಿಕೆ ನೀಡಲಾಯಿತು ಈ ಕಾರ್ಯಕ್ರಮದಲ್ಲಿ ನಮ್ಮ ಮಹಾವಿದ್ಯಾಲಯದ ಎಲ್ಲಾ ಸಿಬ್ಬಂದಿ ವರ್ಗದವರು ಸಕ್ರಿಯವಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಉಪಪ್ರಾಂಶುಪಾಲರಾದ ಪ್ರೊಫೆಸರ್ ಎಚ್. ಕೆ. ಶಿವಪ್ಪ ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ವಂದಿಸಿದರು.

ಇಂತಿ ತಮ್ಮ ವಿಶ್ವಾಸಿ
(ಡಾ.ಕೆ.ಸಿ.ರಮೇಶ್)

Principal
Sri Jagadguru Murugharajendra College
of Arts, Science & Commerce.
CHITRADURGA

Scanned with CamScanner

ಎಸ್.ಜೆ.ಎಂ. ಕಲಾ,ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಂದ್ರವಳ್ಳಿ, ಚಿತ್ರದುರ್ಗ.


ಐ.ಕ್ಯೂ.ಎ.ಸಿ. ಎನ್.ಸಿ.ಸಿ. ಮತ್ತು ರಾ.ಸೇ.ಯೋ ಘಟಕ-1 & 2 ಹಾಗೂ

ಜಿಲ್ಲಾಡಳಿತ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ. ಇವುಗಳ ಸಹಯೋಗದಲ್ಲಿ

ದಿನಾಂಕ 30-6-2021ರಂದು ನಡೆದ 'ಪದವಿ ವಿದ್ಯಾರ್ಥಿಗಳಿಗೆ ಉಚಿತ ಕೋವಿಡ್ ಲಸಿಕಾ ಅಭಿಯಾನ'


ಛಾಯಾಚಿತ್ರಗಳು






Scanned with CamScanner





Scanned with CamScanner

**ಎಸ್.ಜೆ.ಎಂ. ಕಲಾ,ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಚಂದ್ರವಳ್ಳಿ ಚಿತ್ರದುರ್ಗ**

**ಐ.ಕ್ಯೂ.ಎ.ಸಿ , ಎನ್.ಸಿ.ಸಿ. ಮತ್ತು ರಾ.ಸೇ.ಯೋ. ಘಟಕ 1 & 2 ಹಾಗೂ**

**ಜಿಲ್ಲಾಡಳಿತ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ. ಇವುಗಳ ಸಹಯೋಗದಲ್ಲಿ**

**ದಿ.30-06-2021 ರಂದು ನಡೆದ 'ಪದವಿ ವಿದ್ಯಾರ್ಥಿಗಳಿಗೆ ಉಚಿತ ಕೋವಿಡ್ ಲಸಿಕಾ ಅಭಿಯಾನ'**

**ಪತ್ರಿಕಾ ಪ್ರಕಟಣೆ**

ಡಿಎಚ್‌ಒ ಡಾ. ಆರ್.ರಂಗನಾಥ ಹೇಳಿಕೆ | ಎಸ್‌ಜೆಎಂ ಕಾಲೇಜಿನಲ್ಲಿ ಕಾರ್ಯಕ್ರಮ

# ದೊಡ್ಡವರಿಗೂ ಬಾಧಿಸುತ್ತೆ ಕೋವಿಡ್ 3ನೇ ಅಲೆ!

■ ವಿಜಯವಾಣಿ ಸುದ್ದಿಜಾಲ ಚಿತ್ರದುರ್ಗ

ಸಂಭಾವ್ಯ ಕೋವಿಡ್ 3ನೇ ಅಲೆ, ಮಕ್ಕಳೊಂದಿಗೆ ಹಿರಿಯರಲ್ಲೂ ಸೋಂಕು ಬಾಧಿಸುವ ಸಾಧ್ಯತೆ ಅಧಿಕವಿದೆ ಎಂದು ಡಿಎಚ್‌ಒ ಡಾ. ಆರ್.ರಂಗನಾಥ ಹೇಳಿದರು.


ನಗರದ ಚಂದ್ರವಳ್ಳಿ ಎಸ್‌ಜೆಎಂ ಕಾಲೇಜಿನಲ್ಲಿ ಬುಧವಾರ ಪದವಿ ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ಹಾಗೂ ಲಸಿಕೆ ಅಭಿಯಾನ ಉದ್ಘಾಟಿಸಿ ಮಾತನಾಡಿ, ಸೋಂಕಿನೆಡೆ ವಹಿಸಿದ ನಿರ್ಲಕ್ಷ್ಯದಿಂದಾಗಿಯೇ ಇತ್ತೀಚೆಗೆ ಯುವ ಜನರೂ ಅಧಿಕ ಸಂಖ್ಯೆಯಲ್ಲಿ ಸಾವಿಗೀಡಾಗುವಂತಾಗಿದೆ ಎಂದರು. ಸೋಂಕಿನ ಬಗ್ಗೆ ವಿನಾಕಾರಣ ಭಯ ಬೇಡ. ಆದರೆ ಎಲ್ಲರೂ ವ್ಯಾಕ್ಸಿನ್ ಹಾಕಿಸುವ ಜತೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು. ಕೋವಿಡ್ ಕಡಿಮೆಯಾಗಿದೆ ಎಂಬ ಮೋಸಕ್ಕೆ ಬೇಡ. ಮುಂದಿನ 2 ವರ್ಷಗಳವರೆಗೂ

## ವಿದ್ಯಾರ್ಥಿಗಳ ಮನವೊಲಿಕೆ

ಲಸಿಕೆ ಕಾರ್ಯಕ್ರಮದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಗುಂಪೊಂದು ಲಸಿಕೆ ಹಾಕಿಸಿಕೊಳ್ಳಲು ನಿರಾಕರಿಸಿತು. ಆದರೆ ಪ್ರಾಚಾರ್ಯ ಡಾ. ಕೆ.ಸಿ ರಮೇಶ್, ಅಧೀಕ್ಷಕ ಕೆ.ಟಿ.ಕೇಶವಮೂರ್ತಿ ವಿದ್ಯಾರ್ಥಿಗಳ ಮನವೊಲಿಸಿ ಲಸಿಕೆ ಹಾಕಿಸಲು ಯಶಸ್ವಿಯಾದರು.

ಕರೊನಾ ನಿರಂತರವಾಗಿರುತ್ತದೆ. ಅದರ ಜತೆಯಲ್ಲಿ ನಾವು ಜೀವಿಸಬೇಕಿದೆ ಎಂದು ಎಚ್ಚರಿಸಿದರು.

ಅಧ್ಯಕ್ಷತೆ ವಹಿಸಿದ್ದ ಎಸ್‌ಜೆಎಂ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಕೆ.ಸಿ.ರಮೇಶ್ ಮಾತನಾಡಿ, ಕರೊನಾ ಯುವಜನರಿಗೆ ಉತ್ತಮ ಪಾಠವನ್ನು ಕಲಿಸಿದೆ. ಸ್ವಚ್ಛ ಪರಿಸರಕ್ಕೆ ಆದ್ಯತೆ ನೀಡುವುದರೊಂದಿಗೆ ಸದೃಢ ಆರೋಗ್ಯದೆಡೆ ಸಿಗಾ ವಹಿಸಬೇಕೆಂದರು. ಲಸಿಕೆ ಹಾಕಿಸಿಕೊಳ್ಳದ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಲಾಗುವುದೆಂದರು. ಉಪ ಪ್ರಾಚಾರ್ಯ ಪ್ರೊ ಎಚ್.ಕೆ.ಶಿವಪ್ಪ ಹಾಗೂ ನ್ಯಾಕ್ ಸಂಯೋಜಕ ಡಾ.ಆರ್.ವಿ.ಹೆಗಡಾಳ್ ಹಾಗೂ ...



ಚಿತ್ರದುರ್ಗ ಎಸ್‌ಜೆಎಂ ಕಾಲೇಜಿನಲ್ಲಿ ಏರ್ಪಡಿಸಿದ್ದ ಕೋವಿಡ್ ಪರೀಕ್ಷೆ ಹಾಗೂ ಲಸಿಕೆ ಕಾರ್ಯಕ್ರಮವನ್ನು ಡಿಎಚ್‌ಒ ಡಾ. ಆರ್.ರಂಗನಾಥ್ ಉದ್ಘಾಟಿಸಿದರು. ಪ್ರಾಚಾರ್ಯ ಡಾ.ಕೆ.ಸಿ.ರಮೇಶ್, ಪ್ರೊ.ಎಚ್.ಕೆ.ಶಿವಪ್ಪ, ಡಾ.ಆರ್.ವಿ ಹೆಗಡಾಳ್, ಪ್ರಾಧ್ಯಾಪಕ ಡಾ.ರೇವಣ್ಣ ಮತ್ತಿತರರು ಇದ್ದರು.

(ವಿಜಯವಾಣಿ ದಿ.01-07-2021)

**ದುರ್ಗದ ವಿಜಯ**

# ಚಂದ್ರವಳ್ಳಿ ಎಸ್.ಜೆ.ಎಂ ಕಾಲೇಜನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಕೋವಿಡ್ ಲಸಿಕೆ ಅಭಿಯಾನ



(ದುರ್ಗದ ವಿಜಯ ದಿ.01-07-2021)

Scanned with CamScanner